Doc-520
7-10-2

Reg no KRNN — For Influential Publicity — 1-9-76

ಸ್ವರ್ಣ ಮಹೋತ್ಸವ ವೆರವಂಶವಜ್ರಮಹೋತ್ಸವನೇರವೇಂಶಲಿರುವ ಪತ್ರಿಕೆ

ಸತ್ಯವಾದಿ
SATYAVADI

60 th Diamond Jubilee Year
ನೇ ವಜ್ರಮಹೋತ್ಸವ ವರ್ಷ
★ Satyavadi Daily, Mysore 4 ★

ಸಂಸ್ಥಾಪಕರು : ಅರಮನೆ ನಿರಸ್ತೇದಾರ್ ಎಂ. ವಿ. ಸುಬ್ಬರಾವ್ ಸಂಪಾದಕರು : ಧರ್ಮಪ್ರಚಾರನಿರತ ಎಂ. ಎಸ್. ಕೃಷ್ಣರಾವ್ (5 ಪೈಸೆ

ರಾಜ್ಯದ ಡೈರಿಯಲ್ಲಿ ಉಳಿತಾಯ

ಬೆಂಗಳೂರು — ಕರ್ನಾಟಕ ರಾಜ್ಯದ ಮಾಲೀಕತ್ವದ ಬೆಂಗಳೂರು ಡೈರಿಯಲ್ಲಿ ಮಿತವ್ಯಯ ಹಾಗೂ ಕಾರ್ಯಗಳಲ್ಲಿ ದಕ್ಷತೆಯಿಂದ ವರ್ಷಕ್ಕೆ ಹತ್ತು ಲಕ್ಷ ರೂಪಾಯಿಗಳ ಮಿತವ್ಯಯ ಉಂಟಾಗಿದೆ.

★

ಒಂದು ಸಾವಿರ ರೂ ಜುಲ್ಮಾನೆ

ನಂದಯಾಲ್ — ಕಲಬೆರಕೆ ಹಾಲು ಮಾರಿದ ಓರ್ವ ಹಾಲು ಮಾರುವವನಿಗೆ ಒಂದು ಸಾವಿರ ರೂ ಜುಲ್ಮಾನೆ ವಿಧಿಸಲಾಗಿದೆ.

★

5 ವರ್ಷಗಳ ಕಠಿಣ ಸಜೆ

ವಿಜಯವಾಡ — ರೂ 10 ರ ಖೋಟಾ ನಾಣ್ಯ ತಯಾರಿಸುತ್ತಿದ್ದ 5 ಜನರಿಗೆ ತಲಾ 5 ವರ್ಷಗಳ ಕಠಿಣ ಸಜೆ ವಿಧಿಸಲಾಯಿತು.

★

ಸಣ್ಣ ಉಳಿತಾಯ ಕುರಿತು ಪರಿಶೀಲನೆ

ವಿಶಾಖಪಟ್ಟಣ — ರಾಜ್ಯದಲ್ಲಿ ಸಣ್ಣ ಉಳಿತಾಯ ಹೆಚ್ಚಿಸಲು ಮನೆಯಿಂದ ಮನೆಗೆ ಹೋಗಿ ಶೇಖರಿಸುವ ಯೋಜನೆಯನ್ನು ಸರ್ಕಾರ ಪರಿಶೀಲಿಸುತ್ತಿದೆ.

★

ಕುಟುಂಬ ಯೋಜನೆ ಕಡ್ಡಾಯಕ್ಕೆ ಕರೆ

ತಿರುಪತಿ — ಕುಷ್ಠ ರೋಗಿಗಳು ಹಾಗೂ ಅನುವಂಶಿಕ ರೋಗಗ್ರಸ್ತ ಜಿಲ್ಲೆಗಳಿಗೆ ಕುಟುಂಬ ಯೋಜನೆ ಕಡ್ಡಾಯವಾಗಬೇಕೆಂದು ಇಲ್ಲಿನ ಎಕ್ಸಿಕ್ಯುಟೀವ್ ಆಫೀಸರ್ ರವರು ಭಾಷಣ ಮಾಡುತ್ತಾ ಹೇಳಿದರು.

★

ವಿಶ್ವಸಂಸ್ಥೆಯಲ್ಲಿ ಗಂಗಾ ನೀರು ಪ್ರಸ್ತಾಪ

ನವದೆಹಲಿ — ಬಂಗ್ಲಾ ದೇಶವು ಗಂಗಾ ನೀರನ್ನು ಹಂಚಿಕೊಳ್ಳುವ ವಿಚಾರವನ್ನು ವಿಶ್ವಸಂಸ್ಥೆಯಲ್ಲಿ ಎತ್ತಲಿದೆ ಎಂಬುದನ್ನು ಭಾರತ ಟೀಕಾನ್ ನೋಟ್ ಎಂಬುದಾಗಿ ವಿದೇಶಾಂಗ ಮಂತ್ರಿ ಶ್ರೀ ವೈ ಬಿ ಚವಾಣ್ ತಮ್ಮ ಸಚಿವಾಲಯದ ಪಾರ್ಲಿಮೆಂಟರಿ ಸಲಹಾ ಸಮಿತಿ ಸಭೆಯಲ್ಲಿ ತಿಳಿಸಿದರು.

★

ಪ್ರಪ್ರಥಮ ಮಹಿಳಾ ಸೇನಾಧಿಕಾರಿ

ನವದೆಹಲಿ — ಭಾರತ ಸೇನೆಯು ಪ್ರಪ್ರಥಮ ಮಹಿಳಾ ಸೇನಾಧಿಕಾರಿಯನ್ನು ಹೊಂದಿದೆ. ಅವರ ಹೆಸರು ಮಿಸ್ ಜಿ ಎ ರಾಮು.

ರಾಜ್ಯಗಳಿಗೆ ಕೇಂದ್ರ ಸರ್ಕಾರದ ಸೂಚನೆ

ನವದೆಹಲಿ — ವೀಸಾ ಬಂಧಿತರಿಗೆ ಪರಿಹಾರಕ್ಕೆ ಒಂದು ಬಾರಿ ತಮ್ಮ ಸಂಸಾರದವರು ಮತ್ತು ಹತ್ತಿರ ಬಂಧುಗಳನ್ನು ಸಂದರ್ಶನ ಮಾಡಲು ಅವಕಾಶ ಕೊಡಲು ರಾಜ್ಯಗಳಿಗೆ ಕೇಂದ್ರ ಸೂಚಿಸಿದೆ.

★

ಅಂಗೀಕಾರ

ನವದೆಹಲಿ — ಕೇರಳದ ಶಾಸನ ಸಭೆಗೆ ಅಕ್ಟೋಬರ್ 22 ರಿಂದ 6 ತಿಂಗಳು ಜೀವದಾನ ಕೊಡುವ ಮಸೂದೆಯನ್ನು ಲೋಕಸಭೆ ಅಂಗೀಕರಿಸಿತು.

○

ವಿಶ್ವ ಹಿಂದಿ ಕೇಂದ್ರ

ಮಾರಿಷಸ್‌ನ ನೋಕಾದಲ್ಲಿ ನಡೆದ ೨ ದಿನಗಳ ವಿಶ್ವ ಹಿಂದಿ ಸಂಮೇಳನದಲ್ಲಿ ಪ್ರಪಂಚ ಹಿಂದಿ ಕೇಂದ್ರ ಸ್ಥಾಪಿಸಲು ನಿರ್ಧರಿಸಲಾಯಿತು

●

ಮಹಾ ಚುನಾವಣೆ

ನವದೆಹಲಿ — ಮುಂದಿನ ವರ್ಷ ನಡೆಯಬೇಕಾಗಿರುವ ಮಹಾ ಚುನಾವಣೆ ವಿಚಾರದಲ್ಲಿ ಸರ್ಕಾರ ಇನ್ನೂ ಯಾವ ನಿರ್ಧಾರಗಳನ್ನು ಕೈಗೊಂಡಿಲ್ಲವೆಂದು ಲೋಕಸಭೆಯಲ್ಲಿ ತಿಳಿಸಲಾಯಿತು.

○

ಜಪಾನ್ ರಾಕೆಟ್

ಟೋಕಿಯೋ — ಜಪಾನು ಒಂದು ಶಬ್ದ ನಾಡುವ ರಾಕೆಟ್‌ನ್ನು ಯಶಸ್ವಿಯಾಗಿ ಹಾರಿಸಿತು.

● 1921 ರಲ್ಲಿ ನಾಂಜೆಸ್ಟರ್‌ನಲ್ಲಿ ಹೊರಟ ಗಾರ್ಡಿಯನ್ ಈಗ ಲಂಡನ್‌ನಿಂದ ಕೊರಟಿದೆ.

ಮಹಿಳಾ ಜಡ್ಜರು

ನವದೆಹಲಿ — ರಾಜ್ಯಗಳ ಹೈ ಕೋರ್ಟುಗಳಲ್ಲಿ ಜಡ್ಜರ ಖಾಲಿ ಸ್ಥಾನಗಳಿಗೆ ನೇಮಿಸಲು ಸೂಕ್ತವಾದ ಮಹಿಳಾ ಅಡ್ವೊಕೇಟರುಗಳಹ್ನು ಮತ್ತು ನ್ಯಾಯಾಂಗ ಅಧಿಕಾರಿಗಳನ್ನು ಶಿಫಾರಸಿಗಾಗಿ ಮುಖ್ಯ ಮಂತ್ರಿಗಳನ್ನು ವಿನಂತಿಸಲಾಗಿದೆಯೆಂದು ಲೋಕಸಭೆಯಲ್ಲಿ ತಿಳಿಸಲಾಯಿತು — ಈಗ ಹೈ ಕೋರ್ಟ್‌ನಲ್ಲಿ ಒಬ್ಬರು ಮಹಿಳಾ ಜಡ್ಜರಿರುವರೆಂದೂ ಸುಪ್ರೀಂ ಕೋರ್ಟ್‌ನಲ್ಲಿ ಮಹಿಳಾ ಜಡ್ಜರಿಲ್ಲವೆಂದೂ ತಿಳಿಸಲಾಯಿತು

●

ಖೈದಿಗಳಿಗೆ ಕೈಕೋಳ

ನವದೆಹಲಿ — ಖೈದಿಗಳಲ್ಲಿ ಕೆಲವೊಂದು ಜೈಯವರಿಗೆ ಕೈಕೋಳ ಹಾಕದಿರುವಂತೆ ರಾಜ್ಯಗಳ ಮತ್ತು ಕೇಂದ್ರ ಪ್ರದೇಶ ಸರಕಾರಗಳಿಗೆ ತಿಳಿಸಿರುವುದಾಗಿ ಲೋಕಸಭೆಯಲ್ಲಿ ತಿಳಿಸಲಾಯಿತು.

★

ಭಾರಿ ಸಂಪಾದನೆ

ನವದೆಹಲಿ — ಭಾರತದ ಖ್ಯಾತ ವೃತ್ತಿ ಟೆನಿಸ್ ಆಟಗಾರ ಮದಂಜಿತ್ ವಿಜಯ ಅಮೃತರಾಜ್ 1975 ರಲ್ಲಿ ಟೆನಿಸ್ ಆಟದಲ್ಲಿ 83000 ಅಮೇರಿಕ ಡಾಲರು (ರೂ. 684000) ಭಾರಿ ಸಂಪಾದನೆ ಹೊಂದಿದರು — ಅವರ ಅಣ್ಣ ಆನಂದ್ 45000 ಅಮೇರಿಕ ಡಾಲರ್ (ರೂ 360000) ಸಂಪಾದಿಸಿದರು.

○

ಪಾರ್ಲಿಮೆಂಟು ಸದಸ್ಯರಿಗೆ ಪೆನ್ಷನ್

ನವದೆಹಲಿ — 5 ವರ್ಷಗಳು ಅಥವಾ ಅದಕ್ಕಿಂತ ಹೆಚ್ಚು ಅವಧಿ ಪಾರ್ಲಿಮೆಂಟು ಸದಸ್ಯರಾಗಿರುವವರಿಗೆ ರೂ 300 ರಿಂದ 500 ರವರೆಗೆ ಪೆನ್ಷನ್ ಕೊಡುವ ಮಸೂದೆ ಲೋಕಸಭೆಯಲ್ಲಿ ಮಂಡಿಸಲಾಯಿತು.

(2)

ಸತ್ಯವಾದಿ

ರಂಗವಲ್ಲಿಯಲ್ಲಿ ವಿನಾಯಕಗಳು

ಸಾಗರ— ರಂಗವಲ್ಲಿಯಲ್ಲಿ ಬರೆದ ವಿನಾಯಕನ ವಿವಿಧ ರೀತಿಯ ಚಿತ್ರಗಳು ಪ್ರದರ್ಶಿಸಲ್ಪಟ್ಟಿದ್ದವು.

SHAKTI

SUDHA

A Superb Tonic

ಭಾರತದಲ್ಲಿ ಗೋವಧೆ

ಪೂರ್ಣ ನಿಶೇಧವಾಗಲಿ



Help The 'Gorakshana'

—Humanitarian Propoganda Monthly—

Protect the Cow

ವುಡ್‌ಲಾಂಡ್ 3976 ರಿಂದ

ಅವೋಘ ಆರಂಭ

ಡನ್ ನಂಬರಿ

ಹಿಂದಿ

ಕಲರ್

ಮನೋಜ್ ಕುಮಾರ್ ಹೇಮಮಾಲಿನಿ

ಪ್ರೇಮನಾಥ್ ಪ್ರಾಣ್ ಮುಂತಾದವರ ಅಭಿನಯ

ದಿನ 4 ಪ್ರದರ್ಶನಗಳು

ಅಪೆಡಾ 3976 ರಿಂದ

ಸೆಕ್ರೆಟರಿ

ಎ. ನಾಗೇಶ್ವರರಾವ್ ವಾಣಿಶ್ರೀ ಅಭಿನಯ

ತೆಲುಗು

ಪ್ರತಿ ದಿನ 3 ಪ್ರದರ್ಶನಗಳು

ಗೋರಕ್ಷಣ'ಕ್ಕೆ ಸಕಲ ನೆರವು ನೀಡಿ

ಗೋರಕ್ಷಣೆ, ಪ್ರಾಣಿದಯ, ಇತ್ಯಾದಿ ಪವಿತ್ರ ಧ್ಯೇಯಗಳ ಪ್ರಚಾರ ಪತ್ರಿಕೆಗಳು ರಾಷ್ಟ್ರದಲ್ಲಿ ಕೆಲವೇ ಇದ್ದು, ಧಾರ್ಮಿಕ ಪತ್ರಿಕೆಗಳು ಹೆಚ್ಚು ಕಾಲ ಬದುಕಿ ಬಾಳುವುದು ಅಸಾಧಾರಣವಾಗಿರುವಾಗ, "ಗೋರಕ್ಷಣ" ವು ತನ್ನ ಬೆಳ್ಳಿ ಹಬ್ಬ ನೆರವೇರಿಸುತ್ತಿರುವುದು ಹರ್ಷದಾಯಕವಾಗಿದೆ. ಧರ್ಮಾಭಿಮಾನಿಗಳೂ, ಗೋಮಾತೆ ಭಕ್ತರೂ, ಪ್ರಾಣಿದಯಾಪರರೂ ಜಾತಿ, ಮತ, ಭಾಷೆ ಬೇಧಭಾವವಿಲ್ಲದೆ, 'ಗೋರಕ್ಷಣ" ದ ಅಭಿವೃದ್ಧಿ ಸಂದೇಶ ಮತ್ತು ಧನ ನೆರವನ್ನು ನೀಡಬೇಕೆಂದು ವಿನಂತಿಸುತ್ತೇವೆ

'ಗೋರಕ್ಷಣ' ಬೆಳ್ಳಿ ಹಬ್ಬ ಮತ್ತು ಅದರ ಅಭಿವೃದ್ಧಿಗೆ ಉದಾರ ನೆರವು ನೀಡಿರುವವರಿಗೆಲ್ಲಾ ಕೃತಜ್ಞತಾಪೂರ್ವಕ ವಂದನೆಗಳು

ಸಂಪಾದಕ, ಗೋರಕ್ಷಣ ಪತ್ರಿಕೆ, ಚಾಮರಾಜಪುರಂ, ಮೈಸೂರು-4

Contribute Liberally to the National Defence Fund

Edited Printed and Published by Dharmapracharanirata M S Krishna Rao (Proprietor) at the Satyavadi Press, Chamarajapuram Mysore 4